ಸಂಜಯ್ ಕೇಳಿದ.

‘ಶಾಸ್ತ್ರಿಗಳೇ, ನನ್ನ **Herpes** ಕಡಿಮೆ ಆಗುತ್ತಾ ಬಂದಿದೆ. ನಾನು ಎಷ್ಟುದಿನ ಸೀತಾಪುರದಲ್ಲಿರಬೇಕು?’

ಶಾಸ್ತ್ರಿಗಳು ನಗುತ್ತಾ ಹೇಳಿದರು. ‘ನೋಡು ಸಂಜಯ್, ನಿನಗೆ ಹೆಂಡತಿ ಅಮೆರಿಕದಲ್ಲಿ ಕಾಯುತ್ತಾ ಇದ್ದಾಳಾ? ಮಕ್ಕಳು ಕಾಯುತ್ತಾ ಇದ್ದಾರಾ? ಇನ್ನೂ ಮದುವೆಯಾಗದ ಹುಡುಗ ನೀನು. ನೀನೇ ಹೇಳಿದ ಹಾಗೆ ಈ ಕಾಯಿಲೆ ಗುಣವಾದರೂ ಮತ್ತೆ ತಿರುಗಿ ಬರುವ ಸಾಧ್ಯತೆ ಇದೆ. ಇಲ್ಲೊಂದು ತಿಂಗಳು ಇದ್ದು ನೋಡು. ಪುನಃ ಕಾಯಿಲೆ ಬರುತ್ತಾ ಅಂತ.’

ಸಂಜಯನಿಗೆ ತನ್ನ ಅಜ್ಜನ ಮನೆಯನ್ನು ಇನ್ನಷ್ಟು ನೋಡಬೇಕೆಂದು ಕಾಣುತ್ತಿತ್ತು. ಶಾಸ್ತ್ರಿಗಳು ಹೇಳಿದ ಮಾತು ಕೇಳಿ ಆಲೋಚಿಸಿದ. ತಾನು ಇಲ್ಲಿಯೇ ಒಂದು ತಿಂಗಳು ಇರುವ ಅವಕಾಶ ಮಾಡಿದರೆ ಹೇಗೆ ಅಂತ ಲೆಕ್ಕ ಹಾಕಿದ. ಯಾವುದಕ್ಕೂ ತನ್ನ ಅಮೆರಿಕದ ಬಾಸ್ ಹತ್ತಿರ ಮಾತನಾಡಿ ತೀರ್ಮಾನ ಮಾಡುವುದಾಗಿ ನಿರ್ಧರಿಸಿದ.

‘ಆಶಾ, ನನ್ನ ಜೊತೆ ಗುಡ್ಡಕ್ಕೆ ಬರ್ತೀಯ? ನನಗೆ ನನ್ನ ಬಾಸ್ ಹತ್ತಿರ ಮಾತಾಡಬೇಕಾಗಿದೆ’ ಅಂದ.

‘ನೀವು ನಿಮ್ಮ ಬಾಸ್‌ನ ಹತ್ತಿರ ಮಾತಾಡ್ಲಿಕ್ಕೆ ನಾನು ಯಾಕೆ ಬರ್ಬೇಕು?’ ಅಂತ ನಗುತ್ತಾ ಪ್ರಶ್ನಿಸಿದರೂ ಆಶಾ, ಹೊರಟು ನಿಂತಳು.

ಈ ಹುಡುಗಿಯರೇ ಹೀಗೆ, ಹೇಳುವುದೊಂದು ಮಾಡುವುದೊಂದು ಎಂದುಕೊಂಡು ಆಶಾಳ ಜೊತೆ ಸೀತಾಪುರದ ಗುಡ್ಡಕ್ಕೆ ಸಂಜಯ್ ಹೊರಟ.

ಅಲ್ಲಿ ಹೋದವನು ತುಂಬಾ ಹೊತ್ತು ತನ್ನ ಅಮೆರಿಕದ ಜನರ ಜೊತೆ ಮಾತಾಡಿದ.

‘ಮಾತನಾಡಿ ಮುಗಿಯಿತೇ? ಇನ್ನು ಸ್ವಲ್ಪ ಹೊತ್ತಾದರೆ ಈ ಕಾಡಿನ ಮಂಗ ಹಂದಿಗಳಿಗೂ ಇಂಗ್ಲಿಷ್ ಬರ್ತದೆ’ ಅನ್ನುತ್ತಾ ಆಶಾ ಮನೆಗೆ ಹೊರಡುವ ಕಾತುರ ತೋರಿಸಿದಳು.

‘ಆಶಾ, ಒಂದೆರಡು ಇಮೇಲ್ ಬಾಕಿ ಇದೆ, ಸ್ವಲ್ಪ ಹೊತ್ತು’ ಅನ್ನುತ್ತಾ ಸಂಜಯ್ ಅಂದಿನ ಕೊನೆಯ ಇಮೇಲ್ ಕಳುಹಿಸಿ ಮನೆ ಕಡೆಗೆ ಹೊರಟ.

ಬಹಳ ಖುಷಿಯಲ್ಲಿದ್ದ ಸಂಜಯನನ್ನು ನೋಡಿ ಆಶಾ ಕೇಳಿದಳು, ‘ಏನು ರಾಯರು, ಬಹಳ ಖುಷಿಯಲ್ಲಿ ಇದ್ದ ಹಾಗೆ ಕಾಣ್ತದೆ. ಏನಾಯ್ತು?’

ಸಂಜಯ್ ನಿಜಲೋಕಕ್ಕೆ ಬಂದು ‘ಆಶಾ, ನಿನಗೆ ಹೇಗೆ ಹೇಳಬೇಕೋ ಗೊತ್ತಾಗ್ತಿಲ್ಲ. ನಾನು ಎರಡು ತಿಂಗಳು ಸೀತಾಪುರದಲ್ಲಿ ಇರುತ್ತೇನೆ’ ಅಂದ.

‘ಎರಡು ತಿಂಗಳೇ? ಏನು ನಿಮ್ಮ ಬಾಸ್‌ಗೆ ನಿಮ್ಮ ಮುಖ ನೋಡುವುದು ಬೇಡ ಅಂತ ಕಂಡಿತೇನು?’ ಆಶಾ ನಗುತ್ತಾ ಪ್ರಶ್ನಿಸಿದಳು. ಸಂಜಯನಿಗೆ ಆಶಾಳ ತರಹ ಮಾತನಾಡಲು ಬರುತ್ತಿರಲಿಲ್ಲ. ಒಂದು ಕ್ಷಣ ಆಲೋಚಿಸಿ ಹೇಳಿದ.

‘ಹಾಗಾದರೆ ನಿನಗೆ ನಾನು ಇಲ್ಲಿರುವುದು ಇಷ್ಟವಿಲ್ಲ ಅನ್ನು’ ಅಂದ.

‘ಇಲ್ಲಪ್ಪ, ನನಗೋ ಈ ಗುಡ್ಡಕ್ಕೆ ಬರುವ ಡ್ಯೂಟಿ ಮಾಡಲು ಇಷ್ಟ ಇದೆ. ಆದರೆ ನಿಮಗೆ ಸೀತಾಪುರವೇ ಹಿಡಿಸಿಹೋದರೆ ಕಷ್ಟ, ಅಲ್ಲವೇ?’ ಅಂದಳು.

ಆಶಾಳಿಗೂ ಇದು ಖುಷಿ ಕೊಟ್ಟಿತ್ತು. ಪ್ರತೀ ದಿನ ಅಜ್ಜ ಅಜ್ಜಿಯಲ್ಲಿ ಮಾತನಾಡಿ ಬೇಸರಗೊಂಡಿದ್ದ ಆಶಾಳಿಗೆ ತನ್ನ ಮಾತು ಕೇಳುವ ಎರಡು ಹೊಸ ಕಿವಿಗಳು ಸಿಕ್ಕಿದ್ದವು.

ಮನೆಗೆ ಬಂದವರು ನೇರ ಊಟಕ್ಕೆ ಹೋದರು.

ಊಟದ ನಂತರ ಸಂಜಯ್ ಪ್ರತಿದಿನದಂತೆ ತನ್ನ ಅಜ್ಜನ ಮನೆಯ ಕಡೆ ಹೊರಟ. ಶಾಸ್ತ್ರಿಗಳ ಮನೆಯಿಂದ ಅವನ ಮನೆಗೆ ಸರಿಸುಮಾರಾಗಿ ಮೂವತ್ತು ನಿಮಿಷಗಳ ದಾರಿ. ಹೀಗೆ ಪ್ರತಿದಿನ ಹೋಗುತ್ತಾ ಸಂಜಯನಿಗೆ ಅದು ಅಭ್ಯಾಸವಾಗಿ ಹೋಗಿತ್ತು. ಅಜ್ಜನ ಮನೆಗೆ ಹೋದವನು ಮೊದಲಿಗೆ ಚಾವಡಿಯಲ್ಲಿ ಕುಳಿತು ನಂತರ ಮನೆಯ ಸುತ್ತಾ ತಿರುಗಿ ಹಿಂದೆ ಬರುವುದು ಸಂಜಯನ ಹವ್ಯಾಸ. ಇಂದು ಎಂದಿನಂತೆ ಚಾವಡಿಯಲ್ಲಿ ಕುಳಿತ ಸಂಜಯನಿಗೆ ತನ್ನನ್ನು ಯಾರೋ ನೋಡುತ್ತಿರುವ ಭಾವವಾಯಿತು. ಅಲ್ಲಿಂದ ಎದ್ದು ಮನೆಯ ಸುತ್ತ ತಿರುಗಿದ. ಯಾರೋ ತನ್ನನ್ನು ನೋಡಿ ನಕ್ಕಂತೆ ಭಾಸವಾಯಿತು. ಸಂಜಯ್ ಹಿಂದೆ ತಿರುಗಿ ನೋಡಿದ. ಯಾರೂ ಇಲ್ಲ. ಸುತ್ತಮುತ್ತ ನೋಡಿದ. ಯಾರೂ ಕಾಣಲಿಲ್ಲ. ತನಗೆ ಇದು ಕನಸೇ ಅಂತ ಪರಿಶೀಲಿಸಿಕೊಳ್ಳಲು ತನ್ನ ಕೈಗೆ ಚಿವುಟಿಕೊಂಡ. ಇಲ್ಲ, ಇದು ಕನಸಲ್ಲ ಅಂತ ಗೊತ್ತಾಯಿತು. ಇದನ್ನು ಮರೆತು ಬೇರೆ ಕಡೆ ನೋಡಿದ ಹಾಗೆ ನಾಟಕ ಮಾಡಿದ. ಹಿಂದಿನಿಂದ ನಕ್ಕ ಶಬ್ದ ಪುನಃ ಕೇಳಿಸಿತು. ಹಿಂದೆ ತಿರುಗಿ ನೋಡಿದರೆ ಯಾರೂ ಇಲ್ಲ.

ಅಪ್ಪನಿಂದ ಸೀತಾಪುರದ ಭೂತ ಪ್ರೇತಗಳ ಕಥೆಗಳನ್ನು ಹಿಂದೆ ಕೇಳಿದ್ದ ಸಂಜಯನಿಗೆ ಸ್ವಲ್ಪ ಆತಂಕವಾಯಿತು. ಇವತ್ತು ಇಲ್ಲಿರುವುದು ಬೇಡ, ಹಿಂದೆ ಹೋಗುತ್ತೇನೆ ಎಂದು ಲೆಕ್ಕ ಹಾಕುತ್ತಾ ಸಂಜಯ್ ಮರಳಿ ಶಾಸ್ತ್ರಿಗಳ ಮನೆಗೆ ಹೊರಟ.

ದಾರಿಯುದ್ದಕ್ಕೂ ಸಂಜಯನಿಗೆ ತನ್ನನ್ನು ಯಾರೋ ಹಿಂಬಾಲಿಸುವ ಭಾವನೆ ಬರುತ್ತಿತ್ತು. ಬೇಗ ಬೇಗನೆ ಹೆಜ್ಜೆ ಹಾಕಲು ಪ್ರಾರಂಭಿಸಿದ. ಹಿಂದಿನಿಂದ ಅಷ್ಟೇ ವೇಗವಾಗಿ ಯಾರೋ ಹೆಜ್ಜೆ ಹಾಕಿದ ಹಾಗೆ ಆಯಿತು. ತಿರುಗಿ ನೋಡಿದರೆ ಯಾರೂ ಇಲ್ಲ. ಶಾಸ್ತ್ರಿಗಳ ಮನೆಗೆ ಬಂದವನೇ ಮಾದ ಇದ್ದಲ್ಲಿ ಹೋದ.

‘ಮಾದ, ನಾನು ಇವತ್ತು ನಮ್ಮ ಮನೆಗೆ ಹೋದಾಗ ನನ್ನನ್ನು ಯಾರೋ ನೋಡಿದ ಹಾಗೆ ಅಥವಾ ಹಿಂಬಾಲಿಸಿದ ಹಾಗೆ ಕಂಡಿತು’ ಅಂದ.

ಮಾದ ಸ್ವಲ್ಪ ಆಲೋಚನೆ ಮಾಡಿ, ‘ನೋಡಿ ಕಾರಂತರೇ, ಮಧ್ಯಾಹ್ನದ ಹೊತ್ತು, ಮತ್ತೆ ನಡುರಾತ್ರೆಯ ಹೊತ್ತು ಪ್ರೇತ ಪಿಶಾಚಿಗಳು ತಿರುಗಾಡುತ್ತವೆ. ಒಮ್ಮೊಮ್ಮೆ ಅವು ನಮ್ಮನ್ನು ಹಿಂಬಾಲಿಸುವುದೂ ಉಂಟು. ಇದೆಲ್ಲ ಸಾಮಾನ್ಯ’ ಅಂದ.

‘ಪಿಶಾಚಿ’ ಸಂಜಯ್ ಗಾಬರಿಯಿಂದ ಕೇಳಿದ. ‘ಪಿಶಾಚಿ ಎಲ್ಲಿಂದ ಬರುತ್ತವೆ ಮಾದ? ಅವು ನನ್ನನ್ನು ಯಾಕೆ ಹಿಂಬಾಲಿಸುತ್ತವೆ?’

‘ನೋಡಿ ಕಾರಂತರೇ, ಯಾವುದಾದರೂ ವ್ಯಕ್ತಿ ಸಾಯುವಾಗ ಏನಾದರೂ ಆಸೆ ಇಟ್ಟುಕೊಂಡು ಸತ್ತರೆ ಪಿಶಾಚಿ ಆಗುತ್ತಾನೆ ಅನ್ನುತ್ತಾರೆ. ಪಿಶಾಚಿಗೆ ತನ್ನ ಆಶೆ ಪೂರೈಸಬೇಕಾದರೆ ಯಾವುದಾದರೂ ಮನುಷ್ಯ ದೇಹ ಬೇಕು. ಅದಕ್ಕೆ ಮನುಷ್ಯರನ್ನು ಹಿಡಿಯಲು ಅವರ ಹಿಂದೆ ಅವು ಬರುತ್ತವೆ’ ಎಂದ ಮಾದ.

‘ಇದಕ್ಕೆ ಏನು ಮಾಡಬೇಕು ಮಾದ?’ ಸಂಜಯನನ ಧ್ವನಿಯಲ್ಲಿ ಆತಂಕವಿತ್ತು.

‘ನೋಡಿ ಕಾರಂತರೇ’ ಎನ್ನುತ್ತಾ ಮಾದ ಪ್ರೇತ ಪಿಶಾಚಿಗಳನ್ನು ಹೇಗೆ ನಿಯಂತ್ರಿಸಬೇಕು ಎಂಬುದನ್ನು ಹೇಳತೊಡಗಿದ.

‘ನೋಡಿ, ನಿಮ್ಮ ಹಿಂದೆ ಪಿಶಾಚಿಗಳು ಬಂದ ಹಾಗೆ ಆದರೆ ಮೊದಲ ಸಲಹೆಯೇನಂದರೆ, ನೀವು ಹಿಂದೆ ತಿರುಗಿ ನೋಡಬಾರದು. ಒಂದು ವೇಳೆ ನೋಡಿದ್ರೇ ಆದರೆ ಪಿಶಾಚಿಗಳಿಗೆ ನಿಮ್ಮನ್ನು ಹೆದರಿಸುವ, ನಿಮ್ಮನ್ನು ಹಿಡಿದುಕೊಳ್ಳುವ ಅವಕಾಶ ಸಿಗುತ್ತದೆ. ನಮ್ಮಲ್ಲಿ ಕೆಲವರಿಗೆ ಹೀಗೇ ಆದದ್ದುಂಟು. ಪಿಶಾಚಿಯನ್ನು ನೋಡಿ ಜ್ವರ ಬಂದರೆ ಆ ಜ್ವರ ಬೇಗ ಬಿಡುವುದಿಲ್ಲ. ಕೆಲವೊಮ್ಮೆ ಮನುಷ್ಯ ಅದರಲ್ಲೇ ತೀರಿಕೊಂಡದ್ದೂ ಇದೆ’ ಅಂದ.

ಸಂಜಯ್ ಗಾಬರಿಯಾದ. ಈವರೆಗೆ ಸೀತಾಪುರದಲ್ಲಿ ಅವನಿಗೆ ಹುಲಿ ಹಂದಿಯಂತಹ ಕಾಡು ಮೃಗಗಳ ಭಯ ಇತ್ತು. ಈಗ ಕಣ್ಣಿಗೆ ಕಾಣದ ಪಿಶಾಚಿ ಬಂದು ಹೊಸ ಸಮಸ್ಯೆಯಾಗಿ ಕಂಡಿತ್ತು.

‘ಇದಕ್ಕೊಂದು ಉಪಾಯ ಇದೆ ಕಾರಂತರೇ, ನೀವು ನಡೆಯುತ್ತಾ ಹೋಗುವವರು ಮಧ್ಯೆ ಒಮ್ಮೆ ನಿಲ್ಲಬೇಕು. ನಿಂತ ಜಾಗದಲ್ಲಿ ನಿಮ್ಮ ಬಲಕಾಲಿನ ಬೆರಳುಗಳನ್ನು ಉಪಯೋಗಿಸಿಕೊಂಡು ನೆಲದಿಂದ ಮೂರು ಕಲ್ಲುಗಳನ್ನು ಎತ್ತಬೇಕು. ಹೀಗೆ ಕಲ್ಲು ಎತ್ತುವಾಗ ನಾವು ಬಾಗಬಾರದು. ಕಾಲಿನ ಬೆರಳಿನಿಂದಲೇ ಎತ್ತಿ ಕಲ್ಲನ್ನು ಕೈಯಲ್ಲಿ ಹಿಡಕೊಳ್ಳಬೇಕು. ಆಮೇಲೆ ನಿಮ್ಮ ಮನೆಯ ದೇವರ ಪ್ರಾರ್ಥನೆ ಮಾಡಿಕೊಂಡು ಕಲ್ಲುಗಳನ್ನು ನಿಮ್ಮ ತಲೆಯ ಸುತ್ತ ಮೂರು ಸಲ ನೀವಾಳಿಸಿ ಹಿಂತಿರುಗಿ ನೋಡದೆ ಜೋರಾಗಿ ಹಿಂದೆ ಬಿಸಾಡಬೇಕು. ಒಂದುವೇಳೆ ಪಿಶಾಚಿ ನಿಮ್ಮ ಹಿಂದೆ ಬಂದರೂ ನಿಮ್ಮ ಕಲ್ಲು ಬಿದ್ದಷ್ಟು ದೂರದ ಅಂತರದಲ್ಲಿ ಅದು ಇರಬೇಕಾಗುತ್ತದೆ. ನಿಮ್ಮ ಹತ್ತಿರ ಬರಲಿಕ್ಕೆ ಅದಕ್ಕೆ ಆಗುವುದಿಲ್ಲ’ ಅಂದ ಮಾದ.

ಕಾಲಿನಿಂದ ಕಲ್ಲನ್ನು ಹೇಗೆ ಎತ್ತುವುದು, ಹೇಗೆ ಅದನ್ನು ಹಿಂದಕ್ಕೆ ಬಿಸಾಡುವುದು ಇತ್ಯಾದಿ ವಿಷಯವನ್ನು ಸಂಜಯ್ ಮಾದನ ಹತ್ತಿರ ವಿವರವಾಗಿ ಕೇಳಿ ತಿಳಿದುಕೊಂಡ. ಹಾಗೆ ಹಲವು ಬಾರಿ ಕಲ್ಲನ್ನು ಹಿಂದೆ ಬಿಸಾಡಿ ಪ್ರಾಕ್ಟೀಸ್ ಮಾಡಿದ್ದೂ ಆಯಿತು.

ಮರುದಿನ ಸಂಜಯ್ ತನ್ನ ಮನೆಗೆ ಹೊರಟ. ಮನಸ್ಸಿನಲ್ಲಿ ಸ್ವಲ್ಪ ಭಯ ಇತ್ತು. ಮನೆಯವರೆಗೆ ಹೋಗುವವರೆಗೂ ಏನೂ ಆಗಲಿಲ್ಲ. ಮನೆಗೆ ಬಂದವನೇ ಭೂತಸ್ಥಾನಕ್ಕೆ ಹೋಗಿ ಕೈಮುಗಿದ. ಅಲ್ಲೇ ಮನೆಯ ಒಳಗೆ ಹೋಗಿ ಕೂತ. ಇನ್ನೇನು ಅಲ್ಲೇ ಮಂಪರು ಹತ್ತುವ ಸಮಯದಲ್ಲಿ ಯಾರೋ ಕಿಸಕ್ಕನೆ ನಕ್ಕ ಅನುಭವ ಆಯಿತು. ಸಂಜಯನ ಎಲ್ಲಾ ಕೂದಲು ನೆಟ್ಟಗಾಯಿತು. ಅಬ್ಬಾ, ನಿನ್ನೆಯದೇ ಪುನಃ ಆಗುತ್ತಿದೆ ಅಂದುಕೊಂಡ. ಇಲ್ಲಿರುವುದು